ಚಿತ್ರೋಪದೇಶ

## ಪಂಚತಂತ್ರ ಕಥೆ

### ಕಪಿಯಿಂದ ಮರಣ ಹೊಂದಿದ ದೊರೆ



ಒಬ್ಬ ಅರಸ ಇದ್ದ. ಅರಸನ ಅಂಗ ರಕ್ಷಕನಾಗಿ ಒಂದು ಮಂಗ ಇತ್ತು. ಅದು ಬಹಳ ವಿಶ್ವಾಸದಿಂದ ರಾಜನ ಸೇವೆ ಮಾಡಿಕೊಂಡಿತ್ತು. ಅದಕ್ಕೆ ಅಂತಃಪುರದಲ್ಲಿ ವಿಶೇಷ ಮನ್ನಣೆ ಇತ್ತು. ಒಂದು ಮಧ್ಯಾಹ್ನ ರಾಜ ಎಂದಿನಂತೆ ನಿದ್ರಿಸುತ್ತಿದ್ದ. ಮಂಗ ಬೀಸಣಿಕೆಯಿಂದ ಗಾಳಿ ಹಾಕುತ್ತ ಇತ್ತು. ಆಗ ಒಂದು ನೊಣ ಅರಸನ ಎದೆಯ ಮೇಲೆ ಬಂದು ಕುಳಿತಿತು. ಅದನ್ನು ಓಡಿಸಲು ಮಂಗವು ಬಹಳ ಪ್ರಯತ್ನಪಟ್ಟಿತು. ಆದರೆ ಆ ದುಷ್ಟ ನೊಣ ಮತ್ತೆಮತ್ತೆ ಅಲ್ಲಿಯೇ ಬಂದು ಕುಳಿತುಕೊಂಡಿತು. ಮಂಗ ಅದನ್ನು ಪುನಃ ಪುನಃ ಓಡಿಸಲು ಪ್ರಯತ್ನಿಸಿತು. ನೊಣ ಮತ್ತೆ ಮತ್ತೆ ಬಂದು ಕೂತುಕೊಂಡಿತು. ಮಂಗಕ್ಕೆ ಕೋಪ ಏರುತ್ತಲೇ ಹೋಯಿತು. ಅದೇ ಕೊಠಡಿಯಲ್ಲಿ ರಾಜನ ಕತ್ತಿ ಇತ್ತು. ಹಾರಿ ಅದನ್ನು ಎತ್ತಿಕೊಂಡಿತು. ತನ್ನ ಶಕ್ತಿಯನ್ನೆಲ್ಲ ಉಪಯೋಗಿಸಿ, ಎರಡೂ ಕೈಗಳಿಂದ, ರಾಜನ ಎದೆಯ ಮೇಲೆ ಕುಳಿತಿದ್ದ ನೊಣಕ್ಕೆ ಹೊಡೆಯಿತು. ನೊಣ ಆ ಕ್ಷಣ ಹಾರಿ ತಪ್ಪಿಸಿಕೊಂಡಿತು. ಆದರೆ ಹರಿತವಾದ ಕತ್ತಿಯ ಪೆಟ್ಟುಬಿದ್ದು, ರಾಜನ ಎದೆ ಸೀಳಾಗಿ ಹೋಯಿತು. ರಕ್ತ ಹರಿಯಿತು. ರಾಜ ಸತ್ತುಬಿದ್ದನು. ಅದಕ್ಕೇ ಹೇಳುವುದು:

**ಪಂಡಿತೋಽಪಿ ವರಂ ಶತ್ರುಃ ನ ಮೂರ್ಖೋ ಹಿತಕಾರಕಃ**

ಅಂದರೆ, ಪಂಡಿತನಾಗಿರುವವನು ಶತ್ರುವಾಗಿದ್ದರೂ ಪರವಾಗಿಲ್ಲ. ಆದರೆ ನಮ್ಮ ಹತ್ತಿರ ಮೂರ್ಖನನ್ನು ಮಾತ್ರ ಸ್ನೇಹಿತನನ್ನಾಗಿ ಇಟ್ಟುಕೊಳ್ಳಬಾರದು ಎಂದು. ಕನ್ನಡದ ಈ ಗಾದೆಯೂ ಅದನ್ನೇ ಹೇಳುವುದು: **'ಮೂರ್ಖರ ಸಂಗ ಅಭಿಮಾನ ಭಂಗ.' ಯಾವಾಗಲೂ ಬುದ್ಧಿವಂತರ, ಒಳ್ಳೆಯವರ ಸಂಗ ಮಾಡಬೇಕು. ಉಳಿದವರನ್ನು ದೂರವಿಡಬೇಕು. 'ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ' ಎಂದು ಸರ್ವಜ್ಞನೂ ಹೇಳುತ್ತಾನೆ.**

## ಸಂಸ್ಕೃತಿ ಪರಿಚಯ

### ಭಾರತೀಯ ಸಂಸ್ಕೃತಿಯ ಲಕ್ಷಣಗಳು

ಹಿಂದಿನ ತಿಂಗಳು ಸಂಸ್ಕೃತಿ ಎಂದರೇನು ಎಂದು ತಿಳಿದುಕೊಂಡೆವು. ಈ ತಿಂಗಳು ಭಾರತೀಯ ಸಂಸ್ಕೃತಿಯ ಲಕ್ಷಣಗಳೇನು ಎಂದು ತಿಳಿಯೋಣ. ೧. **ಭಾರತೀಯ ಸಂಸ್ಕೃತಿಯದು ಆಧ್ಯಾತ್ಮಿಕ ದೃಷ್ಟಿ.** ಹಾಗೆಂದರೇನು? ನಾವು ಎಲ್ಲವೂ ದೇವರಿಗೆ ಪ್ರಿಯವಾಗಲಿ ಎಂದೇ ಮಾಡುತ್ತೇವೆ. ಅಡುಗೆ ಮಾಡಿದರೆ, ದೇವರಿಗೆ ನೈವೇದ್ಯ ಕೊಟ್ಟು ಉಣ್ಣುತ್ತೇವೆ. ಸಂಗೀತಕಾರರು ಗಾನವನ್ನು ಭಗವಂತನ ಸಂತೋಷಕ್ಕೆ ಹಾಡುವರು. ಶಿಲ್ಪಿಗಳು ದೇವಸ್ಥಾನ ಕಟ್ಟುವರು. ನಾವು ಯಾತ್ರೆ ಹೋಗುವಾಗಲೂ ದೇವರ ಸಾನ್ನಿಧ್ಯವಿರುವ ತೀರ್ಥಕ್ಷೇತ್ರಗಳಿಗೆ ಹೋಗಲು ಇಷ್ಟಪಡುತ್ತೇವೆ. ನಮ್ಮ ಹಿರಿಯರು ಓದುವುದಕ್ಕೆ ದೇವರ ಪುಸ್ತಕಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ. ಅಂದರೆ. ದೇವರಿಗಾಗಿ ಈ ಬದುಕು ಎನ್ನುವುದು ನಮ್ಮ ಜೀವನದೃಷ್ಟಿ. ೨. **ಬೇರೆ ಮತಗಳನ್ನು ಬರೀ ನಾವು ಸಹಿಸಿಕೊಳ್ಳುವುದಿಲ್ಲ, ಎಲ್ಲ ಧರ್ಮಗಳೂ ಭಗವಂತನನ್ನು ಸೇರುವ ವಿವಿಧ ಮಾರ್ಗಗಳು ಎಂದು ಮನಃಪೂರ್ವಕವಾಗಿ ಒಪ್ಪಿಕೊಳ್ಳುತ್ತೇವೆ.** ನಾವು ಯಾರೂ ಬೇರೆಯವರ ಪೂಜೆಯನ್ನು ನಿಂದಿಸುವುದಿಲ್ಲ; ಅದಕ್ಕೆ ಅಡಚಣೆ ಮಾಡುವುದಿಲ್ಲ. ಭಾರತದಲ್ಲಿ ಸಾವಿರಾರು ವರ್ಷಗಳಿಂದ ನಡೆದುಕೊಂಡ ಬಂದ ರೀತಿಯೇ ಇದು. ಒಂದು ಮತದಲ್ಲಿರುವವರೂ ತಮಗೆ ಇಚ್ಛೆ ಬಂದಂತೆ, ದೇವರನ್ನು ಕಾಣಲು ಪ್ರಯತ್ನಿಸಬಹುದು. ಯಾವ ಅಧಿಕಾರ ಚಲಾವಣೆ ಇಲ್ಲಿಲ್ಲ. ೩. **ವ್ಯಕ್ತಿಯೊಬ್ಬ ಸಂಪೂರ್ಣವಾಗಿ ಬೆಳೆಯಲು ಭಾರತೀಯ ಸಂಸ್ಕೃತಿ ವಿಪುಲವಾದ ಅವಕಾಶಗಳನ್ನು ನೀಡುತ್ತದೆ.** ಧಾರ್ಮಿಕ ವಿಚಾರಗಳಲ್ಲಿ ಸ್ವಾತಂತ್ರ್ಯ ಇದೆ. ಸ್ವಂತ ವಿಚಾರ ಮಾಡಲು ಇಲ್ಲಿ ಸಾಧ್ಯ. ಪ್ರತಿಯೊಬ್ಬ ವ್ಯಕ್ತಿಗೂ ಗೌರವ ಕೊಡಬೇಕು ಎನ್ನುವುದನ್ನು ಭಾರತೀಯ ಸಂಸ್ಕೃತಿಯಿಂದ ನಾವು ಕಲಿಯುತ್ತೇವೆ. ೪. **ಭಾರತೀಯ ಸಂಸ್ಕೃತಿ 'ಧರ್ಮ' ಕ್ಕೆ ಅಂದರೆ, ಒಳ್ಳೆಯ ನಡವಳಿಕೆಗೆ ಮಹತ್ವ ಕೊಡುತ್ತದೆ.** ಅದರ ಜೊತೆಗೆ ಜಗತ್ತಿನಲ್ಲಿ ಸುಖವಾಗಿ ಬಾಳಲು ಬೇಕಾದ **'ಅರ್ಥ'** ಅಂದರೆ ಸಂಪತ್ತು, ಹಣ – ಇವುಗಳನ್ನು ಗಳಿಸುವುದಕ್ಕೂ, ಗಳಿಸಿದ ಹಣದಿಂದ ನಮಗೆ ಬೇಕಾದ ರೀತಿಯಲ್ಲಿ ನಮ್ಮ **'ಕಾಮ'** ಅಂದರೆ, ಒಳ್ಳೆಯ ಆಸೆಗಳನ್ನು ತೀರಿಸಿಕೊಳ್ಳುವುದಕ್ಕೂ ಭಾರತೀಯ ಪರಂಪರೆ ಪ್ರೋತ್ಸಾಹಿಸುತ್ತದೆ. ಅದರೆ ಈ ಮೂರೇ ಜೀವನದ ಗುರಿಗಳಲ್ಲ. **ಧರ್ಮ** ಮಾರ್ಗದಲ್ಲಿ ನಡೆದು ದೇವರ ಬಗ್ಗೆ ತಿಳಿದುಕೊಳ್ಳಬೇಕು, ಅವನಲ್ಲಿ ಭಕ್ತಿ ಬೆಳೆಸಿಕೊಳ್ಳಬೇಕು. ನಾವು ದಿನಾ ಪಡುತ್ತಿರುವ ಅನೇಕ ದುಃಖಗಳಿಂದ **ಮೋಕ್ಷ**, ಅಂದರೆ ಬಿಡುಗಡೆ ನಮಗೆ ಬೇಕು. ಮೋಕ್ಷವೇ ನಮ್ಮ ಜೀವನವನ್ನು ಸಾರ್ಥಕವನ್ನಾಗಿ ಮಾಡುವುದು. ( ಮುಂದಿನ ತಿಂಗಳು, ಉಳಿದ ಲಕ್ಷಣಗಳು)

## ನರೇಂದ್ರನಿಂದ ಕಲಿಯಬೇಕಾದ ಪಾಠಗಳು

### ಧೈರ್ಯ ಮತ್ತು ವೈಚಾರಿಕತೆ

ನರೇಂದ್ರ ತನ್ನ ಸ್ನೇಹಿತನ ಮನೆಗೆ ಆಡಲು ಹೋಗುತ್ತಿದ್ದ. ಮನೆಯ ಕಾಂಪೌಂಡಿನಲ್ಲಿ ಒಂದು ದೊಡ್ಡ ಸಂಪಿಗೆ ಮರವಿತ್ತು. ಮರವೆಂದರೆ ನರೇಂದ್ರನಿಗೆ ತುಂಬ ಇಷ್ಟ. ಏಕೆಂದರೆ ಅದರ ಮೇಲೆ ಹತ್ತಿ, ಕೊಂಬೆಯಿಂದ ಕೊಂಬೆಗೆ ಜಿಗಿಯಬಹುದು; ಮರದ ಕೊಂಬೆಗೆ ಕಾಲು ತಗುಲಿಸಿಕೊಂಡು ತಲೆಕೆಳಗಾಗಿ ಜೋತಾಡಬಹುದು!

ಆ ಮನೆಯಲ್ಲೊಬ್ಬ ತಾತಯ್ಯ. ಅವನಿಗೆ ಈ ಹುಡುಗರ ಗಲಾಟೆಯೆಲ್ಲ ಅಷ್ಟೇನೂ ಪ್ರಿಯವಲ್ಲ. ಆದರೇನು ಮಾಡುವುದು? ಆಗ ಆತನ ತಲೆಗೆ ಹೊಳೆಯಿತು– ಮಕ್ಕಳನ್ನು ಓಡಿಸಲು ಒಳ್ಳೆಯ ಉಪಾಯ. ಮೆಲ್ಲಗೆ ಮರದ ಬಳಿಗೆ ಬಂದು, ನಡುಗುವ ಧ್ವನಿಯಲ್ಲಿ ಗಟ್ಟಿಯಾಗಿ ನುಡಿದ: "ಅಯ್ಯಯ್ಯೋ! ಏ ಹುಡುಗ್ರಾ! ಈ ಮರವನ್ನು ಹತ್ತಬೇಡ್ರಪ್ಪ!" ಈ ಮರದ ಮೇಲೊಂದು ದೊಡ್ಡ ಬ್ರಹ್ಮರಾಕ್ಷಸವಿದೆಯಪ್ಪ ! ಅದು ಬಹಳ ಭಯಂಕರವಾದ್ದು. ಬಿಳೀ ಬಟ್ಟೆ ತೊಟ್ಟುಕೊಂಡು ರಾತ್ರಿಯಿಡೀ ಇಲ್ಲೆಲ್ಲ ಓಡಾಡ್ತಿರುತ್ತೆ! ಆ ಬ್ರಹ್ಮರಾಕ್ಷಸ ಈ ಮರ ಹತ್ತಿದವರ ಕತ್ತನ್ನು ಹೀಗ್ ಹಿಡಕೊಂಡು.. ಹೀಗ್ ಹಿಡಕೊಂಡು... ಹೀಗ್ ಹಿಸುಕಿಹಾಕಿಬಿಡುತ್ತೆ !"

ಹುಡುಗರೆಲ್ಲ ತಾತಯ್ಯನ ಮಾತನ್ನು ಕಣ್ಣು ಕಿವಿ ತೆರೆದುಕೊಂಡು ಕೇಳುತ್ತಿದ್ದರು. ಯಾವಾಗ ಆತ, ಹೀಗೆ ಆ ಬ್ರಹ್ಮರಾಕ್ಷಸ ಮರ ಹತ್ತಿದವರ ಕತ್ತನ್ನು ಹಿಸುಕಿಹಾಕಿಬಿಡುತ್ತದೆ ಎಂದನೋ ಎಲ್ಲರೂ ಅಲ್ಲಿಂದ ಪರಾರಿ ! ನರೇಂದ್ರನೂ ದೂರಕ್ಕೆ ಹೊರಟುಹೋದ. ತನ್ನ ಉಪಾಯ ಇಷ್ಟು ಸುಲಭವಾಗಿ ಫಲಿಸಿದ್ದನ್ನು ಕಂಡು ತಾತಯ್ಯ ವಿಜಯೋತ್ಸಾಹದಿಂದ ಬೊಚ್ಚು ಬಾಯಿ ತೆರೆದುಕೊಂಡು ನಗುತ್ತ ಒಳಕ್ಕೆ ಹೋದ. ಆದರೆ ಅವನು ಆ ಕಡೆ ಹೋದನೋ ಇಲ್ಲವೋ, ಈ ಕಡೆ ನರೇಂದ್ರ ಮತ್ತೆ ಬಂದು ಮರ ಹತ್ತಿದ. ಅದನ್ನು ನೋಡಿ ಅವನ ಸ್ನೇಹಿತರು ಅವನನ್ನು ಹೆದರಿಸಿದರು. ನರೇಂದ್ರ ಅವರ ಅವಸ್ಥೆಯನ್ನು ಕಂಡು ಹೇಳಿದ: "ಆ ಬ್ರಹ್ಮರಾಕ್ಷಸ ಇಲ್ಲಿರುವುದು ನಿಜವಾಗಿದ್ದರೆ ನನ್ನ ಕತ್ತು ಹಾರಿ ಹೋಗಿ ಎಷ್ಟೋ ದಿನಗಳಾಗಬೇಕಿತ್ತು. ಆದರೆ ಇನ್ನೂ ಗಟ್ಟಿಯಾಗೇ ಇದೆ ನೋಡಿ!"

(ನೀತಿ: ನಾವು ಎಲ್ಲ ಸಂದರ್ಭದಲ್ಲಿಯೂ ಧೈರ್ಯದಿಂದ ವಿಚಾರ ಮಾಡಿ ನಿಶ್ಚಯಕ್ಕೆ ಬರಬೇಕು. ಸುಮ್ಮನೆ ಎಲ್ಲವನ್ನೂ ನಂಬಬಾರದು; ಎಲ್ಲದಕ್ಕೂ ಹೆದರಬಾರದು)

*(ಮುಂದಿನ ತಿಂಗಳ ಕತೆ 'ಬುದ್ಧಿಚಾತುರ್ಯ' ದ ಬಗ್ಗೆ )*



**ಪಂಚ ಮಾತೆಯರು: ಭೂತಾಯಿ**

ಮಕ್ಕಳೆ, ಹಿಂದಿನ ತಿಂಗಳು ಹೆತ್ತ ತಾಯಿಯನ್ನು ಗೌರವಿಸಬೇಕು ಎಂದು ತಿಳಿದುಕೊಂಡಿರಿ. ನಮ್ಮ ಹೆತ್ತ ತಾಯಿಯಂತೆಯೇ 'ಭೂತಾಯಿ' ಯನ್ನೂ ನಾವು ಗೌರವಿಸಬೇಕು, ಪೂಜಿಸಬೇಕು. ಅವಳ ಮೇಲೇ ನಾವು ಹುಟ್ಟುವುದು. ಅವಳ ಮೇಲೇ ಆಟವಾಡುತ್ತ ಬೆಳೆಯುವುದು. ಅವಳ ಉಡಿಯಲ್ಲಿಯೇ ಬೆಳೆದು ನಾವು ದೊಡ್ಡವರಾಗುವುದು, ಕಡೆಗೆ ಸತ್ತಾಗ, ಅವಳಲ್ಲಿಯೇ ಒಂದಾಗಿ ಹೋಗುತ್ತೇವೆ. ಅವಳಿಗೆ ಎಷ್ಟು ಸಹನೆ ನೋಡಿ. ನಿಮ್ಮ ಕಾಲಿನಲ್ಲಿ ಎಷ್ಟೇ ಓಡಾಡಿದರೂ, ಒದ್ದರೂ ಅವಳು ಸಹಿಸಿಕೊಳ್ಳುತ್ತಾಳೆ. ನಾವು ಭೂತಾಯಿಯಿಂದ ಈ ಸಹನೆಯ ಗುಣವನ್ನು ಕಲಿಯಬೇಕು. ಆದರೂ ಭೂತಾಯಿಗೆ ಒಮ್ಮೊಮ್ಮೆ ಬೇಜಾರಾಗುತ್ತದೆ, ದುಃಖವಾಗುತ್ತದೆ. ಯಾವಾಗ ಗೊತ್ತೆ? ನಾವು ತಪ್ಪು ಮಾಡಿದರೆ, ಕೆಟ್ಟದಾಗಿ ನಡೆದುಕೊಂಡರೆ ಅವಳಿಗೆ ದುಃಖವಾಗುತ್ತದೆ. ನಮ್ಮೆಲ್ಲರನ್ನೂ ಸಂತೋಷವಾಗಿ ಹೊತ್ತಿರುವ ಆ ತಾಯಿಗೆ ನಾವು ದುಷ್ಟರಾದರೆ, ಭಾರವಾಗಿ ಬಿಡುತ್ತೇವೆ. ಅದಲ್ಲದೆ, ಭೂಮಿತಾಯಿಯ ಮೇಲೇ ಗಿಡ–ಮರ–ಬೆಟ್ಟ–ಗುಡ್ಡ–ಕಾಡು ಇವೆಲ್ಲ ಇರುವುದು. ಅವುಗಳಿಗೆ ಹಾನಿ ಆಗದ ಹಾಗೆ ನೋಡಿಕೊಂಡರೆ, ಭೂತಾಯಿಗೆ ಗೌರವ ಸಲ್ಲಿಸಿದ ಹಾಗೆ. ಭೂತಾಯಿಯನ್ನು 'ಪ್ರಕೃತಿಮಾತೆ' ಅಂತಲೂ ಕರೆಯಬಹುದು. ಅವಳಿಂದ ನಾವು ಎಷ್ಟೊಂದನ್ನು ಪಡೆದುಕೊಳ್ಳುತ್ತೇವೆ. ಅವಳಿಗೆ ನಾವು ಏನೂ ಕೊಡುವುದು ಬೇಡವೇ? ಅವಳು ಏನನ್ನೂ ಅಪೇಕ್ಷಿಸುವುದಿಲ್ಲ. ನಾವು ಒಳ್ಳೆಯತನದಿಂದ ನಡೆದುಕೊಂಡು, ನಮ್ಮ ಸುತ್ತಮುತ್ತಲಿರುವ ಪ್ರಕೃತಿಯನ್ನು ರಕ್ಷಿಸಿದರೆ ಸಾಕು. ಮಾಡುತ್ತೀರಾ, ಮಕ್ಕಳೇ? (ಮುಂದಿನ ತಿಂಗಳು: 'ಗೋಮಾತೆ')